ಕರ್ನಾಟಕ ಸರ್ಕಾರ
ಸಹಕಾರ ಚುನಾವಣಾ ಪ್ರಾಧಿಕಾರ

ಸಂಖ್ಯೆ:ಸಚುಪ್ರಾ/ಚುನಾವಣೆ/ 97 /2014

3 ನೇ ಮಹಡಿ, ಶಾಂತಿನಗರ ಟಿ.ಟಿ.ಎಂ.ಸಿ. ಎ ಬ್ಲಾಕ್,
ಶಾಂತಿನಗರ, ಬೆಂಗಳೂರು-27
ದಿನಾಂಕ: 17-12-2014.

ಸಹಕಾರ ಸಂಘಗಳ ಉಪನಿಬಂಧಕರು,

................................

................................ ಜಿಲ್ಲೆ.

ಮಾನ್ಯರೇ,

**ವಿಷಯ:-** ಪದಾವಧಿಯೊಳಗಾಗಿ ನಿಯಮಾನುಸಾರ ಚುನಾವಣೆಗಳನ್ನು ನಡೆಸಲು ಅಧಿಸೂಚನೆಯಲ್ಲಿ ಆಯಾ ಸಂಘಗಳಿಗೆ ಗೊತ್ತುಪಡಿಸಿದ ಅಥವಾ ಅವಕಾಶವಿರುವ ಇನ್ನಿತರ ದಿನಾಂಕಗಳಲ್ಲಿ ಜಿಲ್ಲಾ ಚುನಾವಣಾಧಿಕಾರಿಗಳು/ರಿಟರ್ನಿಂಗ್ ಆಫೀಸರ್‌ಗಳು ಚುನಾವಣೆ ನಡೆಸಲು ಅಗತ್ಯ ಕ್ರಮ ಕೈಗೊಳ್ಳುವ ಬಗ್ಗೆ.

**ಉಲ್ಲೇಖ:-** ಸಹಕಾರ ಚುನಾವಣಾ ಆಯೋಗ, ಬೆಂಗಳೂರು ಇದರ ಅಧಿಸೂಚನೆ ಸಂಖ್ಯೆ: ಸಚುಆ/ಚುನಾವಣೆ/84/2014 ದಿನಾಂಕ: 06-11-2014.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಅಧಿಸೂಚನೆಯಲ್ಲಿ ಮೂರು ಹಂತದಲ್ಲಿ ಚುನಾವಣೆಗಳನ್ನು ನಡೆಸಲು ದಿನಾಂಕಗಳನ್ನು ಗೊತ್ತುಪಡಿಸಲಾಗಿದೆ.

1. ಜನವರಿಯಲ್ಲಿ ಚುನಾವಣೆ ನಡೆಸಲು ಬಾಕಿ ಇರುವ ಎಲ್ಲಾ ರೀತಿಯ ಪ್ರಾಥಮಿಕ ಹಂತದ ಸಹಕಾರ ಸಂಘಗಳ/ ಸಹಕಾರಿಗಳ ಚುನಾವಣೆಗಳನ್ನು 20-12-2014 ಮತ್ತು 21-12-2014 ರಂದು ನಡೆಸಲು ಗೊತ್ತುಪಡಿಸಲಾಗಿದೆ.

| ಕ್ರ ಸಂ | ಪ್ರಾಥಮಿಕ ಸಹಕಾರ ಸಂಘಗಳು/ಸಹಕಾರಿಗಳು | ಚುನಾವಣೆ ನಡೆಸಬೇಕಾದಅವಧಿ /ದಿನಾಂಕ |
|---|---|---|
| 1 | ಜನವರಿ-2015ರಲ್ಲಿ ಚುನಾವಣೆ ನಡೆಸಲು ಬಾಕಿ ಇರುವಎಲ್ಲಾರೀತಿಯ ಪ್ರಾಥಮಿಕ ಹಂತದ ಸಂಘಗಳ/ಸಹಕಾರಿಗಳ ಚುನಾವಣೆಗಳು. | ಶನಿವಾರ 20-12-2014 / ಭಾನುವಾರ 21-12-2014 |

2. ಫೆಬ್ರವರಿಯಲ್ಲಿ ಚುನಾವಣೆ ನಡೆಸಲು ಬಾಕಿ ಇರುವ ಎಲ್ಲಾ ರೀತಿಯ ಪ್ರಾಥಮಿಕ ಹಂತದ ಸಹಕಾರ ಸಂಘಗಳ/ ಸಹಕಾರಿಗಳ ಚುನಾವಣೆಗಳನ್ನು ಕೆಳಕಂಡ ದಿನಾಂಕಗಳಲ್ಲಿ ನಡೆಸಲು ಗೊತ್ತುಪಡಿಸಲಾಗಿದೆ.

| ಕ್ರ ಸಂ | ಪ್ರಾಥಮಿಕ ಸಹಕಾರ ಸಂಘಗಳು/ಸಹಕಾರಿಗಳು | ಚುನಾವಣೆ ನಡೆಸಬೇಕಾದಅವಧಿ /ದಿನಾಂಕ |
|---|---|---|
| 1 | ಹಾಲು ಉತ್ಪಾದಕರ ಸಹಕಾರ ಸಂಘಗಳು | 03-01-2015 - ಶನಿವಾರ / 04-01-2015 - ಭಾನುವಾರ |
| 2 | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು | 09-01-2015 - ಶುಕ್ರವಾರ / 10-01-2015 - ಶನಿವಾರ |

| | | |
|---|---|---|
| 3 | ಪಟ್ಟಣ ಸಹಕಾರ ಬ್ಯಾಂಕುಗಳು, ಗ್ರಾಹಕರ ಸಹಕಾರ ಸಂಘಗಳು ,ಪಿಕಾರ್ಡ್ ಬ್ಯಾಂಕುಗಳು, ನೌಕರರ ಪತ್ತಿನ ಸಹಕಾರ ಸಂಘಗಳು.<br>ದಿನಾಂಕ 03-01-2015 ಮತ್ತು 04-01-2015ರಂದು ಚುನಾವಣೆ ನಡೆಸದೇ ಉಳಿದ ಹಾಲು ಉತ್ಪಾದಕರ ಸಹಕಾರ ಸಂಘಗಳು. | 17-01-2015 - ಶನಿವಾರ / 18-01-2015 - ಭಾನುವಾರ |
| 4 | ಸೌಹಾರ್ದಹಾಗೂ ಇತರೆ ಪತ್ತಿನ ಸಹಕಾರ ಸಂಘಗಳು, ಗೃಹ ನಿರ್ಮಾಣ ಸಹಕಾರ ಸಂಘಗಳು, ಎಲ್ಲಾ ಪತ್ತೇತರ ಸಹಕಾರ ಸಂಘಗಳು, ನೀರುಬಳಕೆದಾರರ ಸಹಕಾರ ಸಂಘಗಳು ಮತ್ತುಇತರೆಎಲ್ಲಾ ಸಹಕಾರ ಸಂಘಗಳು | 24-01-2015 - ಶನಿವಾರ / 25-01-2015 - ಭಾನುವಾರ |

3. ಮಾರ್ಚ್ ತಿಂಗಳಲ್ಲಿ ಚುನಾವಣೆ ನಡೆಸಲು ಬಾಕಿ ಇರುವ ಎಲ್ಲಾ ರೀತಿಯ ಸಹಕಾರ ಸಂಘಗಳ/ ಸಹಕಾರಿಗಳ ಚುನಾವಣೆಗಳನ್ನು ಕೆಳಕಂಡ ದಿನಾಂಕಗಳಲ್ಲಿ ನಡೆಸಲುಗೊತ್ತುಪಡಿಸಲಾಗಿದೆ.

| ಕ್ರ ಸಂ | ಪ್ರಾಥಮಿಕ ಸಹಕಾರ ಸಂಘಗಳು/ಸಹಕಾರಿಗಳು | ಚುನಾವಣೆ ನಡೆಸಬೇಕಾದಅವಧಿ /ದಿನಾಂಕ |
|---|---|---|
| 1 | ಹಾಲು ಉತ್ಪಾದಕರ ಸಹಕಾರ ಸಂಘಗಳು | 01-02-2015 -ಭಾನುವಾರ / 02-02-2015-ಸೋಮವಾರ |
| 2 | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು | 07-02-2015 - ಶನಿವಾರ / 08-02-2015 -ಭಾನುವಾರ |
| 3 | ಪಟ್ಟಣ ಸಹಕಾರ ಬ್ಯಾಂಕುಗಳು, ಗ್ರಾಹಕರ ಸಹಕಾರ ಸಂಘಗಳು ,ಪಿಕಾರ್ಡ್ ಬ್ಯಾಂಕುಗಳು, ನೌಕರರ ಪತ್ತಿನ ಸಹಕಾರ ಸಂಘಗಳು.<br>ದಿನಾಂಕ 01-02-2015 ಮತ್ತು 02-02-2015 ರಂದುಚುನಾವಣೆ ನಡೆಸದೇ ಉಳಿದ ಹಾಲು ಉತ್ಪಾದಕರ ಸಹಕಾರ ಸಂಘಗಳು. | 14-02-2015 - ಶನಿವಾರ / 15-02-2015 - ಭಾನುವಾರ |
| 4 | ಸೌಹಾರ್ದಹಾಗೂ ಇತರೆ ಪತ್ತಿನ ಸಹಕಾರ ಸಂಘಗಳು, ಗೃಹ ನಿರ್ಮಾಣ ಸಹಕಾರ ಸಂಘಗಳು, ಎಲ್ಲಾ ಪತ್ತೇತರ ಸಹಕಾರ ಸಂಘಗಳು, ನೀರುಬಳಕೆದಾರರ ಸಹಕಾರ ಸಂಘಗಳು ಮತ್ತುಇತರೆಎಲ್ಲಾ ಸಹಕಾರ ಸಂಘಗಳು | 21-02-2015 - ಶನಿವಾರ / 22-02-2015 - ಭಾನುವಾರ |
| 5 | ಚುನಾವಣೆ ನಡೆಸಲು ಬಾಕಿ ಉಳಿದ ಇತರೆಯಾವುದೇ ಸಹಕಾರ ಸಂಘಗಳು / ಸಹಕಾರಿಗಳು. | 27-02-2015 - ಶುಕ್ರವಾರ / 28-02-2015 - ಶನಿವಾರ<br>01-03-2015 - ಭಾನುವಾರ |

ಅಧಿಸೂಚನೆಯಲ್ಲಿ ಮೂರು ಹಂತದಲ್ಲಿ ಪ್ರಾಥಮಿಕ ಸಂಘಗಳ ಚುನಾವಣೆ ನಡಸಲು ಚುನಾವಣಾ ಪ್ರಾಧಿಕಾರವು ಉದ್ದೇಶಿಸಿದ್ದು, ಚುನಾವಣೆಯನ್ನು ಪದಾವಧಿಯೊಳಗಾಗಿ ನಿಯಮಾನುಸಾರ ನಡೆಸಬೇಕಾಗಿರುವ ಕಾರಣ ಕೆಲವೊಂದು ಸಹಕಾರ ಸಂಘಗಳ/ಸಹಕಾರಿಗಳ ಪದಾವಧಿಯು 1-3-2015 ರಿಂದ 7-3-2015 ಕ್ಕೆ ಮುಗಿಯಲಿದ್ದು, ಅಂತಹ ಸಂಘಗಳ/ ಸಹಕಾರಿಗಳ ಚುನಾವಣೆಯನ್ನು ಪ್ರಾಧಿಕಾರದ ಅಧಿಸೂಚನೆಯಂತೆ ಫೆಬ್ರವರಿ ತಿಂಗಳಲ್ಲಿ ನಿಗದಿಪಡಿಸಿದ ದಿನಾಂಕಗಳಲ್ಲಿ ಚುನಾವಣೆಗಳನ್ನು ನಡೆಸಿದಾಗ ಪದಾವಧಿಯೊಳಗಾಗಿ ನಿಯಮಾನುಸಾರ ಪದಾಧಿಕಾರಿಗಳ ಚುನಾವಣೆಯನ್ನು ನಡೆಸಲು ಕನಿಷ್ಠ 15 ದಿನಗಳ ಕಾಲಾವಕಾಶದ ಲಭ್ಯತೆ ಆಗದೇ ಇರುವುದು ಪ್ರಾಧಿಕಾರದ ಗಮನಕ್ಕೆ ಬಂದಿರುವ ಹಿನ್ನೆಲೆಯಲಿ ಅಂತಹ ಸಂಘಗಳು ಪ್ರಾಧಿಕಾರದ ಅಧಿಸೂಚನೆಯಲ್ಲಿ ಗೊತ್ತುಪಡಿಸಿರುವಂತೆ ನಿಯಮಾನುಸಾರ ಪದಾವಧಿಯೊಳಗಾಗಿ ಚುನಾವಣೆ ನಡೆಸಲು ಸಾಧ್ಯವಾಗದೇ ಇದ್ದಂತಹ ಎಲ್ಲಾ ರೀತಿಯ ಪ್ರಾಥಮಿಕ ಸಹಕಾರ ಸಂಘಗಳ/ ಸಹಕಾರಿಗಳ ಚುನಾವಣೆಗಳನ್ನು ಅಧಿಸೂಚನೆಯಲ್ಲಿ ಗೊತ್ತುಪಡಿಸಿದ ತಿಂಗಳಿಗಿಂತ ಮೊದಲ ತಿಂಗಳಿನಲ್ಲಿ ಪೂರ್ವಭಾವಿಯಾಗಿ ಸಂಬಂಧಿಸಿದ ಸಂಘಗಳಿಗೆ ಗೊತ್ತುಪಡಿಸಲಾದ

ದಿನಾಂಕಗಳಲ್ಲಿ ಅಥವಾ ಅಧಿಸೂಚನೆಯಲ್ಲಿ ಅವಕಾಶವಿರುವ ಇನ್ನಿತರ ದಿನಾಂಕಗಳಲ್ಲಿ ಚುನಾವಣೆಯನ್ನು ನಡೆಸುವುದು ಸೂಕ್ತವೆಂದು ಅಭಿಪ್ರಾಯಪಟ್ಟು ಈ ಉದ್ದೇಶದಿಂದ ಈಗಾಗಲೇ ಅಂತಹ ಸಂಘಗಳಿಗೆ ರಿಟರ್ನಿಂಗ್ ಆಫೀಸರ್‌ಗಳನ್ನು ನೇಮಕಾತಿ ಮಾಡಲಾಗಿದ್ದು, ಈ ಬಗ್ಗೆ ಜಿಲ್ಲಾ ಚುನಾವಣಾಧಿಕಾರಿಗಳು ಮತ್ತು ರಿಟರ್ನಿಂಗ್ ಆಫೀಸರ್‌ಗಳು ಅಂತಹ ಸಂಘಗಳಿಗೆ ಚುನಾವಣೆಯನ್ನು ಪದಾವಧಿ ಮುಗಿಯುವುದರೊಳಗಾಗಿ ಪ್ರಾಧಿಕಾರದ ಅಧಿಸೂಚನೆಯಲ್ಲಿ ನಮೂದಿಸಿರುವ ನಿಗದಿಪಡಿಸಿದ ತಿಂಗಳಿನಲ್ಲಿ ಅಥವಾಅದಕ್ಕೆ ಮುಂಚಿತವಾಗಿ ಆಯಾ ಸಂಘಗಳಿಗೆ ನಿಗದಿಪಡಿಸಿದ ದಿನಾಂಕಗಳಲ್ಲಿ ಅಥವಾ ಅವಕಾಶವಿರುವ ಇನ್ನಿತರ ದಿನಾಂಕಗಳಲ್ಲಿ ಆಡಳಿತ ಮಂಡಳಿ ಮತ್ತು ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸಲು ಅಗತ್ಯಕ್ರಮ ಕೈಗೊಳ್ಳುವಂತೆ ತಿಳಿಸಿದೆ.

**ತಮ್ಮ ವಿಶ್ವಾಸಿ,**

**(ಬಿ.ಹೆಚ್. ಮಂಜಪ್ಪ)**

**ಕಾರ್ಯದರ್ಶಿ**